RegdNo B G 155 Sri 14—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಪಾದಕರು – ಧರ್ಮಪ್ರಚಾರವಿಶಾರದ ಎಂ.ಎಸ್. ಕೃಷ್ಣರಾವ್ ಸಂಪಾದಕರು – ಅವಧಾನಿವಿದ್ವಾನ್ ಎಂ ಎ ಸುಬ್ಬರಾಯುರು 2ಪೈ

ಪಾಕಿಸ್ತಾನಕ್ಕೆ ಭಾರತ ಪ್ರಧಾನಿಗಳ ಎಚ್ಚರಿಕೆ

ಒಟ್ಟಾವಾ— ಪಾಕಿಸ್ತಾನವು ಕಚ್ ನ ರಣ್‌ನಲ್ಲಿ ಆಕ್ರಮಣವನ್ನು ಮುಂದುವರಿಸಿದರೆ ತೀವ್ರ ಪರಿಣಾಮಕ್ಕೆ ಅವಕಾಶವಾಗುವುದೆಂದು ಭಾರತ ಪ್ರಧಾನಿ ಶಾಸ್ತ್ರಿಗಳು ಜಜ್ಞರಿಸಿದರು — ಭಾರತವು ತನ್ನ ದೇಶವನ್ನು ರಕ್ಷಿಸಿಕೊಳ್ಳುವುದೆಂದೂ ತನ್ನ ಭೂಮಿಯಲ್ಲಿ ಸ್ವಲ್ಪವೂ ಬಿಟ್ಟುಕೊಡುವುದಿಲ್ಲವೆಂದೂ ಹೇಳಿದರು.

★

ಗುಂಡುಹಾರಿಸುವುದು

ನವದೆಹಲಿ— ಅತಿ ತೀವ್ರ ಪರಿಸ್ಥಿತಿಯಲ್ಲಿ ಮಾತ್ರ ಗುಂಡು ಹಾರಿಸತಕ್ಕದ್ದೆಂದು ಕೇಂದ್ರವು ರಾಜ್ಯಗಳಿಗೆ ಸೂಚಿಸಿದೆ.

ಕಾಡು ಬಾಳೆಯಿಂದ ಪ್ರಚಾರ

ಬೆಂಗಳೂರು— ನಿನ್ನೆ ನಡೆದ ಕಾರ್ಪೊರೇಷನ್ನಿನ ಉಪಚುನಾವಣೆಯಲ್ಲಿ ಒಂದು ಬೂತಿನ ಹತ್ತಿರ ಒಬ್ಬ ಜುಮೇದಾರ್ತಿ ೨೯ ಮಗ ಕಾಡುಬಾ ಹುಡುಗ ತನ್ನ ತಂದೆಯು ಚುನಾವಣಾ ಗುಂತಿನ ಭಿತ್ತಿಪತ್ರವನ್ನು ತನ್ನ ಕತ್ತಿಗೆ ತಗಲುಹಾಕಿಕೊಂಡು ನಿಂತಿದ್ದನು.

ಆಟರಿ

ನವದೆಹಲಿ— ಆಟರಿ ನಡೆಸುವುದನ್ನು ನಿಲ್ಲಿಸಬೇಕೆಂಬ ಕೇಂದ್ರದ ಸಲಹೆಗೆ ಆಂಧ್ರಪ್ರದೇಶ, ಒರಿಸ್ಸಾ, ಪಶ್ಚಿಮ ಬಂಗಾಳ ಸಮ್ಮತಿಸಿಲ್ಲ.

★

ಭಾಷಾ ಸಮಸ್ಯೆ

ಬೆಲ್ಲೂರು— ಭಾಷಾ ಶಾಸನ ತಿದ್ದುಪಡಿ ಆಗುವುದರಲ್ಲಿ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿರುವುದೆಂದು ಮುದಂಸು ಮುಖ್ಯಮಂತ್ರಿ ಹೇಳಿದರು

ಸಿಂಹದ ಮರಿಗಳು

ವೆಟಿಕಾರ್ ನಗರ— ೮ ನೇ ಪೋಪ್ ಪಾಲರು ಭಾರತ ಪಾರಿತೋಷಕಪಾಗಿಶ್ರ ಎರಡು ಸಿಂಹದ ಮರಿಗಳನ್ನು ಸ್ವೀಕರಿಸಿ ಅವುಗಳನ್ನು ತಮ್ಮ ಹಳೇ ದಟ್ಟಣದಲ್ಲಿನ ಪ್ರಾಣಿಸಂಗ್ರಹಾಲಯಕ್ಕೆ ಕಳುಹಿಸಿದರು

★

ನೀತಿಮಾತು

ಹೈದರಾಬಾದು— ಪಾಲ್ಗುಣಾರ್ಜುನ ರಾಜ್ಯದ ಉಪಮುಖ್ಯಮಂತ್ರಿಯು ಮಿಸ್ ಮಲೇಷಿಯಾ ಪ್ರಶಸ್ತಿಗೆ ಸ್ಪರ್ಧಿಸಲಿರುವ 15 ಮಂದಿ ಸೌಂದರ್ಯ ರಾಣಿಯರನ್ನು ಸಾರ್ವಜನಿಕ ಉಡುಪಿನಲ್ಲಿ ಸ್ಪರ್ಧಿಸಲು ಪ್ರತಿಬಂಧಿಸಿದ್ದಾರೆ : ನಮ್ಮ ವಿದ್ಯಾರ್ಥಿನೀತಿ ಶಾಪೋಷಾಡಲು ಹುರುಪು ಇಡಬೇಕೆಂದೂ ಪ್ರತಿಯೊಂದು ಪಾಠಶಾಲೆಯ ನವೀನ ಒಂದನ್ನು ಅನುಕರಿಸಲು ಅಷ್ಟು ವೇಗವಾಗಿ ಚಲಿಸಲಾಗಿಲ್ಲವೆಂದೂ ಹೇಳಿದರು.

★

ಅಫ್ರೋ ಏಷ್ಯಾ ಸಮ್ಮೇಳನ

ಅಲ್ಜೀರ್ಸ್— ಏಷ್ಯಾ-ಆಫ್ರೋ ಸಮ್ಮೇಳನದಲ್ಲಿ ಕಡೇ ಪಕ್ಷ 50 ಸರಕಾರಗಳು ಭಾಗವಹಿಸುವುದೆಂದು ಅಧ್ಯಕ್ಷ ಬೆನ್ ಬೆಲಾ ಹೇಳಿದರು.

★

ಅಕಾರ ಸಂಬಂಧ ತಕ್ಷೀರು

ಬೆಂಗಳೂರು— ರಾಜ್ಯದ ಸಿಪಿಡಿ ಶಾಖೆಯ್ಯ, ಅಪಾಂ ಸಾಮಗ್ರಿಗಳ ಕಳ್ಳ ಸಾಗಾಣಿಕೆ, ಅವ್ಯವಹಾರ್ಯೆ ಮಾರ್ಕೆಟ್ ೯೬ ದಾಸಾತ್ತನು ಸಂಬಂಧವಾಗಿ ಎಪ್ರಿಲ್ 10 ರಿಂದ 38 ಮೊಖದ್ದಮೆಗಳನ್ನು ರಿಜಿಸ್ಟರು ಮಾಡಿರುವುದು

★

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾಧ್ಯಾಪಕ್ಕ, ಜ್ಯೋತಿರ್ವಿದ್ವನ್ಮಣಿ
ಸುಂದರ್ಶನ ಜೋಯಿಸರುಂಡ

15 ಮಂಗಳವಾರ ಪಾಡ್ಯ ಮೂಲ

ಶೇಕ್ ಅಬ್ದುಲ್ಲಾ ಬಿಡುಗಡೆ

ಉಟಕಮಂಡ್— ಒಂದು ಸ್ಥಳೀಯ ಮುನ್ಸೀಪಿಯಲ್ಲಿ ವಾರದ ಪ್ರಾರ್ಥನಾಸಭೆ ಕಾಶ್ಮೀರದ ಮಾಲಿಕ್ ಅಬ್ದುಲ್ ಅಜೀಜ್ ಎಂಬಾತನು ಕಾಶ್ಮೀರಿ ಭಾಷೆಯಲ್ಲಿ ಷೇಕ್ ಅಬ್ದುಲ್ಲ ಮತ್ತು ಮಿರ್ಜಾ ಬೇಗರೊಂದಿಗೆ ಮಾತನಾಡಿದ್ದಕ್ಕೆ ಬಂಧಿಸಲ್ಪಟ್ಟನು.

★

ಸೀಮೆಂಟು

ಅಹಮದಾಬಾದು— 300 ಚದುರ ಗಜಕ್ಕೆ ಮೀರಿದ ಕಟ್ಟಡಗಳಿಗೆ ಸೀಮೆಂಟಿಲ್ಲವೆಂದು ಸರಕಾರ ಪ್ರಕಟಿಸಿದೆ.

★

ಭಾರತಕ್ಕೆ ನಾಶ

ಲಂಡನ್— ದುರ್ಗಾಪುರದ ಉಕ್ಕಿನ ಕಾರ್ಖಾನೆ ವಿಸ್ತರಣೆಗೆ ಬ್ರಿಟಿಷ್ ಸಾಲ 60 ಮಿಲಿಯ ಪೌಂಡು ದೊರೆಯುವುದೆಂದು ಭಾರತದ ಉಕ್ಕಿನ ಮಂತ್ರಿ ಸಂಜೀವ ರೆಡ್ಡಿ ಹೇಳಿದರು.

★

ನೆಹ್ರೂ ಎಗ್ಸಿಬಿಷನ್

ನವದೆಹಲಿ— ಲಂಡನ್ನಿನಲ್ಲಿ ಈಗ ನಡೆಯುತ್ತಲಿರುವ ನೆಹ್ರೂ ಎಗ್ಸಿಬಿಷನ್ನಿಗೆ ಭೇಟಿ ಕೊಟ್ಟ ರಾಣಿ ಎಲಿಜಬೆತ್‌ರಿಗೆ ನೆಹ್ರೂ ಸ್ಮಾರಕ ನಾಣ್ಯವು ಪಾರಿತೋಷಕವಾಗಿ ಕೊಡಲಾಯಿತು

★

ಭಾಂತಿದ ಜಾಹಿರಾತು

ಒಟ್ಟಾವಾ— ಭಾರತದ ಪ್ರಧಾನಿ ಶಾಸ್ತ್ರಿಗಳವರ ಭೇಟಿಯು ಈ ಸಮಯದಲ್ಲಿ ಸ್ಥಳೀಯ ಪತ್ರಿಕೆಯೊಂದರಲ್ಲಿ ಪೂರ್ತಿ ಪುಟದಲ್ಲಿ ಕಚ್‌ನ ರಣ್‌ನಲ್ಲಿಯ ಪಾಕಿಸ್ತಾನದ ಆಕ್ರಮಣವನ್ನು ಕುರಿತ ಜಾಹಿರಾತು ಪ್ರಕಟವಾಗಿರುವುದನ್ನು ಪಾಕಿಸ್ತಾನದ ಹೈ ಕಮಿಷನರು ಇಲ್ಲಿಯ ವಿದೇಶಾಂಗ ಕಚೇರಿಯಲ್ಲಿ ಪ್ರತಿಭಟಿಸಿರುವರು.

ಓಟರುಗಳಲ್ಲಿ ಉತ್ಸಾಹವಿಲ್ಲ

ಬೆಂಗಳೂರು— ಪಾರ್ಲಿಮೆಂಟು ಉಪಚುನಾವಣೆಯಲ್ಲಿ ನಿನ್ನೆ ಹಸುವಂಕನಗಂದಲ್ಲಿ ಸಂಕಾರಿ ಮಾಡಲ್ ಸ್ಕೂಲು ಬೂತಿಗೆ ಬರಬೇಕಾಗಿದ್ದ 1103 ಓಟರುಗಳಲ್ಲಿ ಒಬ್ಬರೂ ಓಟು ಕೊಡಲಿಲ್ಲ — ಎದ್ಯಾಮಂದಿರ ಸ್ಕೂಲು ಬೂತಿಗೆ 1040 ಓಟುಗಳಲ್ಲಿ 4 ಓಟುಗಳು ದೊರೆಯಿತು — ಒಂದು ಕಡೆ 12 ಗಂಟೆ ವರೆಗೆ ಬ್ಯಾಲೆಟ್ ಪೆಟ್ಟಿಗೆ ಬರೀದಾಗಿತ್ತು — ಕಡುಗಂಡನ ಹಳ್ಳಿಯಲ್ಲಿ 631 ಓಟರುಗಳಲ್ಲಿ 60 ಜನ ಮಾತ್ರ ಓಟು ಕೊಟ್ಟರು.

★

೧ ರೂ 10 ಲಕ್ಷ ನಷ್ಟ

ಬೆಂಗಳೂರು— 3 ದಿವಸಗಳ ಹೆಜ್ ಎಂ ಟಿ ಲಾಕ್ ಔಟಿನಿಂದ 10 ಲಕ್ಷ ರೂಗಳ ನಷ್ಟವಾಗಿದೆ : ಉತ್ಪತ್ತಿಯಲ್ಲಿ 9 ಲಕ್ಷ, ಕೂಲಿ 1 ಲಕ್ಷ ರೂಗಳು.

1 ಲಕ್ಷ ಹೋಂ ಗಾರ್ಡ್

ದ್ವಾರಕಾ (ಗುಜರಾತು)— ಕೇಂದ್ರ ಸಂಕಾರ 1 ಲಕ್ಷ ಹೋಂ ಗಾರ್ಡ್ ಗಳನ್ನು ತರಬೇತು ಮಾಡಲು ನಿರ್ಧರಿಸಿದೆ.

ಗಿಡಗಳಿಗಾಗಿ

ನವದೆಹಲಿ— ಗಿಡಗಳ ರಕ್ಷಣೆಗಾಗಿ ನಾಲ್ಕನೇ ಯೋಜನೆಯಲ್ಲಿ 437 ಕೋಟಿ ರೂಗಳನ್ನು ಉಪಯೋಗಿಸುವ ಸ್ಕೀಮನ್ನು ಆಹಾರ ಕೃಷಿಸಚಿವಾಲಯವು ಯೋಜಿಸಿದೆ

ಶ್ರೀಮನೋನ್ಮನೀ ಸಂಸ್ಕೃತ ಪಾಠಶಾಲೆಗೆ
ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ ಆಶೀರ್ವಾದ

—೦—

ತಾ 6-6-65 ಭಾನುವಾರ ಬೆಳಗ್ಗೆ 9-90 ಕ್ಕೆ ಸರಿಯಾಗಿ ಪಶ್ಚಿಮಾಮ್ನಾಯ ದ್ವಾರಕಾ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಶ್ರೀಮದಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮೀಗಳವರು ಜೆಂಗಳೂರು ಬಸವನಗುಡಿ ಪುಟ್ಟಣ್ಣ ರಸ್ತೆಯಲ್ಲಿರುವ ಶ್ರೀ ಮನೋನ್ಮನೀ ಸಂಸ್ಕೃತ ಪಾಠಶಾಲೆಗೆ ದಯ ಮಾಡಿಸಿದಾಗ ಪಾಠಶಾಲೆಯು ವ್ಯವಸ್ಥಾಪಕರಾಗಿರುವ ತಲಕಾಡು ಬಗವಿಕ ಕೃಷ್ಣಮೂರ್ತಿಯವರೂ, ಪಾಠಶಾಲಾ ಸಮಿತಿಯ ಸದಸ್ಯರುಗಳೂ ಅಧ್ಯಕ್ಷ ರೂ ಮತ್ತು ಇತರ ಗಣ್ಯರಿಂದಲೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದಲೂ ಪೂರ್ಣ ಕುಂಭ ಮರ್ಯಾದೆಯೊಡನೆ ಜಗದ್ಗುರುಗಳನ್ನು ಸ್ವಾಗತಿಸಿದರು ; ಶ್ರೀಶ್ರೀ ಗಳವರು ಪಾಠಶಾಲೆಯ ಶ್ರೀ ಬಜಪುವಾಡಿಸುವ ಶ್ರೀ ವಿದ್ಯಾಗಣಪತಿಸ್ವಾಮಿಯವರು ಸನ್ನಿಧಿಯಲ್ಲಿ ಮಂಗಳಾರತಿ ಸ್ವೀಕರಿಸಿ ಪುಷ್ಪಾಂಜಲಿಯನ್ನು ಸಮರ್ಪಿಸಿದರು.

ವಿದ್ಯಾರ್ಥಿನಿಯರಿಂದ ಸ್ವಾಗತಗೀತೆ, ದೇವತಾಸ್ತೋತ್ರ ಪಠನವಾದಮೇಲೆ ಶ್ರೀ ಕೃಷ್ಣದೀಕ್ಷಿತರು ಸ್ವಾಗತ ಭಾಷಣ ಮಾಡುತ್ತಾ, ಶ್ರೀ ಜಗದ್ಗುರು ಸ್ವಾಮಿಗಳವರು ತಮ್ಮ ಪಾರ್ಥನೆಯನ್ನು ಮನ್ನಿಸಿ ಪಾಠಶಾಲೆಗೆ ದಯಮಾಡಿಸಿ ಶಾಲೆಯ ಸಂಚಾಲಕ ವರ್ಗವನ್ನೂ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಆಶೀರ್ವದಿಸಲು ಕೃಪೆಯಿಟ್ಟದ್ದಕ್ಕಾಗಿ ಕೃತಜ್ಞತೆಯ ವಂದನೆಗಳನ್ನರ್ಪಿಸಿದರು.

ಶ್ರೀ ಜಗದ್ಗುರು ಮಹಾಸ್ವಾಮಿಗಳವರು 'ಸಂಸ್ಕೃತ ವಿದ್ಯಾಭ್ಯಾಸದ ಮಹತ್ವ ಮತ್ತು ಪ್ರಯೋಜನಗಳನ್ನು ವಿವರಿಸುತ್ತಾ, ಈ ಪಾಠಶಾಲೆಯಲ್ಲಿ ಬಾಲ ಶಿಕ್ಷಣಕ್ಕಾಗಿ ರಚಿತವಾಗಿರುವ 'ಭಾರತೀಯ ಸಂಸ್ಕೃತ ಬಾಲಶಿಕ್ಷಾ' ಎಂಬ ಗ್ರಂಥವನ್ನು ನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಸಂಸ್ಕೃತ ವಿದ್ಯಾಭ್ಯಾಸವು ಸ್ತೋತ್ರ ರೂಪವಾದ ಬಾಲ್ಯದಿಂದಲೇ ಆರಂಭವಾಗಿ ಕ್ರಮ-ಕ್ರಮವಾಗಿ ಅಮರ - ಕಾವ್ಯ - ಕಾವ್ಯ ಮೊದಲಾದ ವ್ಯಾಕರಣಗಳಲ್ಲಿ ವೃದ್ಧಿಯಾಗಿ ತಾನು ಬಂದೇಕಾದ್ದೇ ಸೊಗಸಾದುದೆಂದೂ ಸಂಸ್ಕೃತ ಕಾವ್ಯಗಳಲ್ಲಿ ಸೀತಾಬೋಧಕವಾದ ಅನೇಕ ಆದರ್ಶಗಳಿದ್ದು ಅವುಗಳ ವ್ಯಾಸಂಗದಿಂದ ಬಾಲಕರೂ ಮತ್ತು ಬಾಲಕಿಯರು ಸುಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಉತ್ತಮ ಪ್ರಜೆಗಳಾಗುವರೆಂದೂ, ಈ ಪಾಠಶಾಲೆಯಲ್ಲಿ ಅಂತಹ ವಿದ್ಯಾಭ್ಯಾಸ ನಡೆಯುತ್ತಿರುವುದು ತಮಗೆ ತುಂಬಾ ಸಂತೋಷವನ್ನುಂಟುಮಾಡಿದೆಯೆಂದೂ ಅಪ್ಪಣೆ ಕೊಡಿಸಿ, ವಿದ್ಯಾರ್ಥಿವೃಂದಕ್ಕೆ ಬಹುಮಾನ ರೂಪವಾಗಿ ಹನ್ನೊಂದು ರೂಪಾಯಿಗಳ ಸಹಾಯದ್ರವ್ಯವನ್ನು ದಯಪಾಲಿಸಿದರು.

'ಈ ಪಾಠಶಾಲೆಯು ವ್ಯವಸ್ಥಾಪಕರಿರುವ ಶ್ರೀ ಕೃಷ್ಣದೀಕ್ಷಿತರೂ ಮುಖ್ಯೋಪಾಧ್ಯಾಯರಾಗಿರುವ ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳವರೂ ಅಧಿಯಂತರೂ ವೇದ - ಆಗಮ - ಸಂಸ್ಕೃತ ವಿದ್ಯಾಭ್ಯಾಸಗಳ ಅಭಿವೃದ್ಧಿಯು ವಿಷಯದಲ್ಲಿ ವಿಶೇಷ ಮುಖದಿಂದ ನಿಃಸ್ವಾರ್ಥ ಸೇವೆ ಸಲ್ಲಿಸುತ್ತಿರುವುದನ್ನು ಪ್ರಸ್ತಾಪಿಸಿ, ಅವರುಗಳು ನಡೆಸಿಕೊಂಡು ಬರುತ್ತಿರುವ 'ಧರ್ಮಸಂದೇಶ' ಮಾಸಪತ್ರಿಕೆಯ ಸಹಾಯಾರ್ಥವಾಗಿ (ರೂ 51) ಏನತೊಂಬತ್ತೊಂದು ರೂಪಾಯಿಗಳ ಸಹಾಯವನ್ನು ಇಂದು ಕೊಡುವುದಾಗಿಯೂ ಜಗದ್ಗುರುಗಳು ಅಪ್ಪಣೆ ಕೊಡಿಸಿದರು.

ಪಾಠಶಾಲೆಯ ಸಲಹಾ ಸಮಿತಿಯ ಅಧ್ಯಕ್ಷರಾಗಿರುವ ವಿಜೈರ್ಮ್ ಅಸಿಸ್ಟೆಂಟು ಕಮಿಷನರು ಶ್ರೀ ಹೆಚ್ ಕೆ ಶಾಂತವೀರಪ್ಪನವರು ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಗೆ ಪಾಠಶಾಲೆಯ ಕೃತಜ್ಞತೆಯ ರೂಪವಾದ ಫ್ಯಾಕ್ಸಿಂಚಿತ್ ಕಾಣಿಕೆಯೊಡನೆ ಫಲಪುಷ್ಪ ಸಹಿತ ಸುಂದರ ತಟ್ಟೆಯನ್ನೂ ಪುಷ್ಪಾಹಾರವನ್ನೂ ಸಮರ್ಪಿಸಿ ಮಂಗಳಾರ್ಪಣೆ ಮಾಡಿದರು.

ಮುಖ್ಯೋಪಾಧ್ಯಾಯರಾಗಿರುವ ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳು, ಅಧ್ಯಾಪಕರಾಗಿರುವ ಅನಿತ್ಯಾನ ವಿದ್ವಾನ್ ಶ್ರೀ ಆರ್ ಸೇಕುಮಾಧವಾಚಾರ್ಯರು, ಪಾಠಶಾಲೆಯ ಸಂಚಾಲಕ ವರ್ಗದವರು ಮುಂತಾದವರೆಲ್ಲರಿಗೂ ಫಲಮಂತ್ರಾಕ್ಷತೆಗಳನ್ನು ದಯಪಾಲಿಸಿ, ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಆಶೀರ್ವದಿಸಿದರು. ನಂತರ ಶ್ರೀ ಪುರುಷೋತ್ತಮ ಜಗದ್ಗುರು ಮಹಾಸ್ವಾಮಿಗಳವರು ದಿವ್ಯ ಸಂದೇಶವನ್ನು ತಿಳಿಸಿ ಫಲಮಾನಂದಭರಿತರಾದರು.

ವುಡ್‌ಲಾಂಡ್ಸ್ ಜನವಟ್ಟಣೆಯ 4 ನೇ ವಾರ

ಶಿ ಸ ★

ಪೇಕ್ಷಕರಿಂದ ತುಂಬಿತುಳುಕುವ ಚಿತ್ರವೆಂದರೆ ಪ್ರದರ್ಶಿತವಾಗುತ್ತಿದೆ

ಸುಂದರ ದೃಶ್ಯಗಳು, ಸಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,
ಹಾಸ್ಯವಿನೋದಗಳಿಂದ ತೂಡಿದ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ

★

ಜಾನ್‌ವರ್ JANWAR

ನಾಕ- ಶಮ್ಮಿ ಕಪೂರ್, ರಾಜಶ್ರೀ, ನೀರಜ್‌ರಾಜೇಂದ್ರನಾಥ್, ಪೃಥ್ವೀರಾಜ್

ಆಪೆರ— ಜಯಪ್ರದ 3 ನೇ ವಾರ

ಅತ್ಯಮೋಘ ಕನ್ನಡ ಚಿತ್ರ — ಪ್ರತಿದಿನ 3 ಆಟಗಳು

ನನ್ನ ಕರ್ತವ್ಯ

ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು
ಚಂದ್ರಜಾಬು, ಸಂಧ್ಯಾ, ಜಯ ಲಲಿತ

SHAKTI
SUDHA

A Superb Tonic



Help The Gorakshana

— ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ —

Edited, printed and published by Dharma Prachara Nirata M. S. Krishna Rao (prop) at the Satyavadi Press, Chamarajapuram, Mysore 4